**ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲಃ ಪ್ರತಿವಾದಿಗಳ ಪರ ಶ್ರೀ ಕೆ.ಪಿ.ಎಂ. ವಕೀಲರಿಂದಃ**

1) ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಅಸಲು ದಾವಾ ಸಂಖ್ಯೆ 176/1997 ರ ಪ್ರಕರಣದಲ್ಲಿ ನನ್ನ ಅಜ್ಜಿ ಯಾವ ಯಾವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಕೆಂಪಯ್ಯ ರವರ ಆಸ್ತಿ ಎಂದರೆ ಸರಿ. ಕೆಂಪಯ್ಯ ರವರು ದಾವಾ ಸ್ವತ್ತನ್ನು ದೇವೀರಮ್ಮ ರವರಿಗೆ ಪತ್ರದ ಮೂಲಕ ಬರೆದುಕೊಟ್ಟಿದ್ದು ಆ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಆ ಸ್ವತ್ತನ್ನು ದೇವೀರಮ್ಮ ಮತ್ತು ಕೆಂಪಯ್ಯ ರವರು ಮಾರಾಟ ಮಾಡಬಾರದು ಎಂದು ಬರೆದುಕೊಟ್ಟಿದ್ದಾಗಿ ನುಡಿಯುತ್ತಾರೆ.

2) ದಿಃ12.02.1954 ರಂದು ಕೆಂಪಯ್ಯರವರು ದೇವೀರಮ್ಮ ರವರ ಹೆಸರಿಗೆ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಾಯಿತ ದಾಖಲೆಯ ಮೇರೆಗೆ ದಾವಾ ಸ್ವತ್ತನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೆಂಪಯ್ಯ ಮತ್ತು ತಿಬ್ಬಯ್ಯ ರವರು ಸದರಿ ಪತ್ರದಲ್ಲಿ ದೇವೀರಮ್ಮ ರವರಿಗೆ ದಾವಾ ಸ್ವತ್ತನ್ನು ತನ್ನ ಜೀವಿತಾಕಾಲದಲ್ಲಿ ಆಕೆಯ ಜೀವನೋಪಾಯಕ್ಕಾಗಿ ಮಾತ್ರ ಬರೆದುಕೊಟ್ಟಿದ್ದರು ಎಂದರೆ ಸರಿ. ಸದರಿ ಪತ್ರದಲ್ಲಿ ದೇವೀರಮ್ಮನಿಗೆ ಗಂಡು ಮಗ ಆದಲ್ಲಿ ಹಾಗೂ ಕೆಂಪಯ್ಯ ನ ಮೊದಲನೆಯ ಹೆಂಡತಿ ಮಗನಿಗೆ ಸಮನಾಗಿ ದಾವಾ ಸ್ವತ್ತು ಹಂಚಿಕೆ ಆಗಬೇಕು ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ.

3) ವಾದ ಪತ್ರದಲ್ಲಿ ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಚನ್ನಪ್ಪ ಮತ್ತು ಕೆಂಪಯ್ಯ ರವರ ಆಸ್ತಿ ಇರುವುದಾಗಿ ಬರೆಸಿರುತ್ತೇವೆ. ದಾವೆ ಹೂಡಲು ವಕೀಲರಿಗೆ

ಮಾಹಿತಿಯನ್ನು ದೇವೀರಮ್ಮ ನೀಡಿರುತ್ತಾರೆ. ಈ ದಾವೆ ಹೂಡುವ ಕಾಲಕ್ಕೆ ದಾವಾ ಸ್ವತ್ತಿನ ಪೂರ್ವ ಮತ್ತು ಪಶ್ಚಿಮಕ್ಕೆ ಹಳ್ಳ ಇದೆ ಎಂದು ನಮೂದಿಸಿದ್ದು ಸದರಿ ಹಳ್ಳ ಎಷ್ಟು ಅಡಿ ಇತ್ತು ಎಂದರೆ ಸಾಕ್ಷಿಯು 10 ರಿಂದ 12 ಅಡಿ ಅಗಲ ಇರುವುದಾಗಿ ನುಡಿಯುತ್ತಾರೆ.

3) ದಾವಾ ಸ್ವತ್ತಿನ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಬೇರೆಯವರ ಜಮೀನುಗಳು ಇದ್ದು ಅಲ್ಲಿ ಮಾವಿನ ಮರಗಳನ್ನು ಬೆಳೆಸಿರುತ್ತಾರೆ. ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಇರುವ ಜಮೀನಿನಲ್ಲಿ ತೆಂಗಿನ ಮರಗಳನ್ನು ಬೆಳೆಸಿರುತ್ತಾರೆ. ದೇವಿರಮ್ಮ ಮತ್ತು ಕೆಂಪಯ್ಯ ರವರು ಒಟ್ಟಾಗಿ 35 ವರ್ಷಗಳ ಕಾಲ ಜೀವನ ನಡೆಸಿರುತ್ತಾರೆ. ದೇವೀರಮ್ಮ ರವರು 1954 ರಲ್ಲಿ ಈ ಮೇಲೆ ಹೇಳಿದಂತೆ ಜೀವನಾಂಶದ ಕುರಿತು ಆಕೆಯ ಹೆಸರಿಗೆ ದಾಖಲೆಯನ್ನು ಬರೆದ ನಂತರ ಆಕೆ ತನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

4) ದೇವೀರಮ್ಮ ತನ್ನ ತಂದೆ ಮನೆಗೆ ಹೋದ ನಂತರ ಕೆಂಪಯ್ಯ ರವರು ಒಂದು ಗಂಡು ಮಗುವನ್ನು ದತ್ತಕವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ದಿಃ06.09.1993 ರಂದು ಕೆಂಪಯ್ಯ ಉ ಕೆಂಪೇಗೌಡ ರವರು ತಾನು ಶಿವರಾಜು.ಡಿ ಎಂಬ ಮಗುವನ್ನು ದತ್ತಕ ಪಡೆದಿದ್ದು ಆತನಿಗೆ ತನ್ನ ಆಸ್ತಿ ಸೇರಬೇಕು ಎಂದು ನೋಂದಾಯಿತ ಉಯಿಲನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1975 ರಿಂದ ಕೆಂಪಯ್ಯ ಉ ಕೆಂಪೇಗೌಡ ಮತ್ತು ಆತನ ದತ್ತಕ ಮಗನಾದ ಶಿವರಾಜು.ಡಿ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ.

5) ವಾದಿ ಲಕ್ಷ್ಮಿದೇವಮ್ಮ ರವರ ಕಣ್ಣಿಗೆ ಶಸ್ತ್ರಚಿಕಿತ್ಸೆ ಆಗಿರುವ ಕಾರಣ ಆಕೆ ನ್ಯಾಯಾಲಯಕ್ಕೆ ಬರಲು ಆಗುತ್ತಿಲ್ಲ. ವಾದಿಯು ವಿವಾಹವಾದ ನಂತರ ತನ್ನ ಗಂಡನ ಮನೆಯಲ್ಲಿ ವಾಸವಿದ್ದು ಆಕೆ ದಾವಾ ಸ್ವತ್ತಿಗೆ ಉಳುಮೆ ಮಾಡುವ ಸಲುವಾಗಿ ಯಾವತ್ತೂ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಕುಮಾರ್.ಬಿ.ಟಿ. ರವರು ಪುಟ್ಟಕ್ಕ, ರವಿ, ಶಿವರಾಜು ಮತ್ತು ರಮೇಶ್ ರವರ ವಿರುದ್ಧ ದೂರು ನೀಡಿದ್ದರು.

6) ದಾವಾ ಸ್ವತ್ತಿನಲ್ಲಿ ಮೊದಲಿನಿಂದಲೂ ರಾಗಿಯನ್ನು ಬೆಳೆಯುತ್ತಿದ್ದೆವು. ಶಿವರಾಜು ರವರು ತಮ್ಮ ಜೀವಿತಾಕಾಲದಲ್ಲಿ ದಾವಾ ಸ್ವತ್ತಿನಲ್ಲಿ ಉಪ್ಪುನೇರಳೆ ಬೆಳೆಯನ್ನು ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಆತ ಮೃತಪಟ್ಟ ನಂತರ ಆತನ ವಾರಸುದಾರರು ದಾವಾ ಸ್ವತ್ತಿನಲ್ಲಿ ರಾಗಿ ಬೆಳೆಯನು ಸ್ವತ್ತನ್ನು ಹಸನ ಮಾಡಿದ್ದಾರೆ ಎಂದರೆ ಸರಿಯಲ್ಲ. ದೇವೀರಮ್ಮ ರವರು ಕಾನೂನು ಬಾಹಿರವಾಗಿ ವಾದಿಗೆ ದಾನ ಪತ್ರಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯನ್ನು ನ್ಯಾಯಾಲಯಕ್ಕೆ ಕರೆಸಿದ್ದಲ್ಲಿ ಸತ್ಯಾಂಶ ಹೊರಬರುತ್ತದೆ ಎಂಬ ಕಾರಣಕ್ಕಾಗಿ ಆಕೆಯನ್ನು ನ್ಯಾಯಾಲಯಕ್ಕೆ ಕರೆಸದೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದು ಅದನ್ನು ತಪ್ಪಿ ಸುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೇವೀರಮ್ಮ ರವರಿಗೆ ಆಕೆಯ ತಾತನ ನಂತರ ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳು ದಾಖಲಾಗಿರುತ್ತವೆ. ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**